# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 739 |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಮುನಿರಾಜು ಗೌಡ ಪಿ.ಎಂ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 22.09.2022 |
| ಉತ್ತರಿಸುವ ಸಚಿವರು | : | ಮುಖ್ಯಮಂತ್ರಿ. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಅನ್ನಭಾಗ್ಯ ಯೋಜನೆಯಲ್ಲಿ ಪ್ರತಿ ಕುಟುಂಬಕ್ಕೆ ವಿತರಣೆ ಮಾಡುತ್ತಿರುವ ಪಡಿತರದ ಪ್ರಮಾಣ ಎಷ್ಟು; | ಪ್ರತಿ ತಿಂಗಳು ಅಂತ್ಯೋದಯ ಅನ್ನ ಯೋಜನೆಯ ಪ್ರತಿ ಪಡಿತರ ಚೀಟಿಗೆ 35 ಕೆ.ಜಿ ಆಹಾರ ಧಾನ್ಯ (ಅಕ್ಕಿ+ರಾಗಿ/ಜೋಳ) ಮತ್ತು ಆದ್ಯತಾ ಪಡಿತರ ಚೀಟಿಯ ಪ್ರತಿ ಸದಸ್ಯರಿಗೆ 05 ಕೆ.ಜಿ ಆಹಾರ ಧಾನ್ಯ (ಅಕ್ಕಿ+ರಾಗಿ/ಜೋಳ) ಉಚಿತವಾಗಿ ಪ್ರತಿ ಮಾಹೆ ಹಂಚಿಕೆ ನೀಡಲಾಗುತ್ತಿದೆ. ಆಹಾರಧಾನ್ಯವನ್ನು ಪಡೆಯಲು ಇಚ್ಛೆಯನ್ನು ವ್ಯಕ್ತಪಡಿಸಿರುವ ಆದ್ಯತೇತರ (ಎನ್.ಪಿ.ಹೆಚ್.ಹೆಚ್) ಏಕ ಸದಸ್ಯ ಪಡಿತರ ಚೀಟಿಗೆ 05 ಕೆ.ಜಿ ಅಕ್ಕಿ ಮತ್ತು ಒಬ್ಬರಿಗಿಂತ ಹೆಚ್ಚಿನ ಸದಸ್ಯರಿರುವ ಪಡಿತರ ಚೀಟಿಗೆ 10 ಕೆ.ಜಿ ಅಕ್ಕಿಯನ್ನು ಪ್ರತಿ ಕೆ.ಜಿ ಗೆ ರೂ. 15/-ರ ಸಬ್ಸಿಡಿ ದರದಲ್ಲಿ ವಿತರಿಸಲಾಗುತ್ತಿದೆ. |
| ಆ | ಅನ್ನಭಾಗ್ಯ ಯೋಜನೆಯ ಪಡಿತರ ವಿತರಣೆ ಪ್ರತಿ ಕೆ.ಜಿಗೆ ತಗಲುವ ವೆಚ್ಚ ಎಷ್ಟು; ಇದಕ್ಕಾಗಿ ಕೇಂದ್ರ ಸರ್ಕಾರ ಭರಿಸುವ ವೆಚ್ಚ ಮತ್ತು ರಾಜ್ಯ ಸರ್ಕಾರ ಭರಿಸುವ ವೆಚ್ಚವೆಷ್ಟು; | ಕೇಂದ್ರ ಸರ್ಕಾರವು ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ಪಡಿತರ ಫಲಾನುಭವಿಗಳಿಗೆ ವಿತರಿಸಲಾಗುವ ಪ್ರತಿ ಕೆ.ಜಿ. ಅಕ್ಕಿಯನ್ನು ರೂ.3/- ದರದಲ್ಲಿ ಹಾಗೂ ಜೋಳ/ರಾಗಿಯನ್ನು ಪ್ರತಿ ಕೆ.ಜಿ ಗೆ ರೂ.1/- ರ ದರದಲ್ಲಿ ಹಂಚಿಕೆ ಮಾಡುತ್ತಿದೆ. ಈ ಆಹಾರ ಧಾನ್ಯವನ್ನು ಭಾರತ ಆಹಾರ ನಿಗಮದಿಂದ ಖರೀದಿಸಿ ಪಡಿತರ ಫಲಾನುಭವಿಗಳಿಗೆ ಉಚಿತವಾಗಿ ವಿತರಣೆ ಮಾಡಲಾಗುತ್ತಿದೆ. ರಾಜ್ಯಗಳಲ್ಲಿರುವ ಹೆಚ್ಚುವರಿ ಆದ್ಯತಾ ಚೀಟಿಗಳಿಗೆ ಅಗತ್ಯವಿರುವ ಅಕ್ಕಿಯನ್ನು ಪ್ರತಿ ಕೆ.ಜಿ.ಗೆ ರೂ. 23/-ರ ದರದಲ್ಲಿ ಭಾರತ ಆಹಾರ ನಿಗಮದಿಂದ ಖರೀದಿಸಿ ಉಚಿತವಾಗಿ ವಿತರಿಸಲಾಗುತ್ತಿದೆ.<br>ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ಬರುವ ಪಡಿತರ ಫಲಾನುಭವಿಗಳಿಗೆ ವಿತರಿಸಲಾಗುವ ಆಹಾರಧಾನ್ಯಗಳ ಸಾಗಾಣಿಕೆ ಮತ್ತು ಸಗಟು ಮತ್ತು ಚಿಲ್ಲರೆ ಲಾಭಾಂಶದಲ್ಲಿ 50% ರಷ್ಟು ವೆಚ್ಚವನ್ನು ಕೇಂದ್ರ ಸರ್ಕಾರದಿಂದ ಭರಿಸಲಾಗುತ್ತದೆ. ಉಳಿದ 50% ರಷ್ಟು ವೆಚ್ಚವನ್ನು ರಾಜ್ಯ ಸರ್ಕಾರ ಭರಿಸುತ್ತದೆ. |

ಇ

ಅನ್ನಭಾಗ್ಯ ಯೋಜನೆಗೆ 2010 ರಿಂದ 2020 ರವರೆಗೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಬಿಡುಗಡೆ ಮಾಡಿದ/ವೆಚ್ಚ ಮಾಡಿದ ಮೊತ್ತವೆಷ್ಟು? (ವಿವರ ನೀಡುವುದು)

ರಾಜ್ಯದಲ್ಲಿ ಅನ್ನಭಾಗ್ಯ ಯೋಜನೆಯು 2013-14ನೇ ಸಾಲಿನಿಂದ ಜಾರಿಗೆ ಬಂದಿರುತ್ತದೆ. ಮುಂದುವರೆದು, 2013-14 ರಿಂದ 2020-21ನೇ ಸಾಲಿನವರೆಗೆ ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡಿರುವ ಅನುದಾನದ ವಿವರ ಹಾಗೂ ವೆಚ್ಚದ ವಿವರಗಳು ಈ ಕೆಳಕಂಡಂತಿರುತ್ತದೆ.

ರೂ.ಲಕ್ಷಗಳಲ್ಲಿ

| ಆರ್ಥಿಕ ಸಾಲು | ಬಿಡುಗಡೆಯಾದ ಅನುದಾನ | ವೆಚ್ಚಗೊಂಡ ಅನುದಾನ |
|---|---|---|
| 2013-14 | 339600.00 | 304604.22 |
| 2014-15 | 436500.00 | 253328.00 |
| 2015-16 | 226640.00 | 219585.02 |
| 2016-17 | 197578.00 | 185387.76 |
| 2017-18 | 288235.00 | 254171.86 |
| 2018-19 | 357809.00 | 357004.47 |
| 2019-20 | 375500.00 | 369895.76 |
| 2020-21 | 325762.00 | 310365.77 |

ಮೇಲ್ಕಂಡ ಪಟ್ಟಿಯಲ್ಲಿ ವಿವರಿಸಿರುವಂತೆ ಅನ್ನಭಾಗ್ಯ ಯೋಜನೆಗೆ ರಾಜ್ಯ ಸರ್ಕಾರದಿಂದ ವೆಚ್ಚ ಭರಿಸಿದ್ದು, ಸದರಿ ವೆಚ್ಚದಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಮರುಪಾವತಿಯಾಗಿರುವ ಮೊತ್ತ ಈ ಕೆಳಕಂಡತಿರುತ್ತದೆ.

ರೂ.ಲಕ್ಷಗಳಲ್ಲಿ

| ಆರ್ಥಿಕ ವರ್ಷ | ಕೇಂದ್ರ ಸರ್ಕಾರದಿಂದ ಮರು ಪಾವತಿಯಾದ ಮೊತ್ತ |
|---|---|
| 2014-15 & 2015-16 | 32841.24 |
| 2016-17 | 15311.60 |
| 2017-18 | 17609.64 |
| 2018-19 | 15536.96 |
| 2019-20 | 16445.00 |
| 2020-21 | 17345.00 |

ಆನಾಸ 176 ಡಿಆರ್‌ಎ 2022 (ಇ-ಆಫೀಸ್)

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ